| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1615/2022**

ಸಾಕ್ಷಿದಾರನ ಹೆಸರು ಃ ವಿಠಲ ನಾಯಕ್ ಪಿ.ಡಬ್ಲ್ಯೂಃ 2

ತಂದೆಯ ಹೆಸರುಃ ರಾಘವ ನಾಯಕ್ ಸಿ.ಡಬ್ಲ್ಯೂಃ 2

ಪ್ರಾಯ ಃ 72 ವರ್ಷ

ಉದ್ಯೋಗ ಃ ಏನೂ ಇಲ್ಲ

ವಾಸ ಃ ಪಳ್ಳಿ

ದಿನಾಂಕ 01-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಈ ದಿನ ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಅರೋಪಿತರನ್ನು ಪೋಲಿಸರು ಮಹಜರಿಗೆ ಕರೆದುಕೊಂಡು ಬಂದಾಗ ನೋಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. 3 ನೇ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಅವರನ್ನು ಗುರುತಿಸುವಲ್ಲಿ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ಚಾಸಾ-1, 3 ರಿಂದ 6 ಪರಿಚಯ ಇದೆ. ಚಾಸಾ 1 ಮತ್ತು 5 ಮಕ್ಕಳು. ಚಾಸಾ 3 ಹೆಂಡತಿ. ಚಾಸಾ 4 ಮತ್ತು 6 ಸೊಸೆ.

ನಾವು 1 ಕಪ್ಪು ಬಣ್ಣದ ದನವನ್ನು ಮನೆಯಲ್ಲಿ ಸಾಕಿಕೊಂಡಿರುತ್ತೇವೆ. ದಿಃ 14-10-2021 ರಂದು ಸದರಿ ದನವನ್ನು ಮೇಯಲು ಪೇಟೆಗೆ ಬಿಟ್ಟಿರುತ್ತೇವೆ. ಸಾಮಾನ್ಯವಾಗಿ ಮೇಯಲು ಬಿಟ್ಟ ಹಸು ಸಂಜೆ ಹೊತ್ತಿಗೆ ಮನೆಗೆ ಬರುತ್ತಿತ್ತು ಆ ದಿನ ಮನೆಗೆ ವಾಪಾಸ್ಸು ಬಂದಿರುವುದಿಲ್ಲ. ನಂತರ 2-3 ದಿನಗಳ ಕಾಲ ಪೇಟೆಯಲ್ಲಿ ಹಸುವನ್ನು ನಾನು ಮತ್ ನನ್ನ ಮಗ, ಅವನ ಸ್ನೇಹಿತರು ಹುಡುಕಿರುತ್ತೇವೆ ಆದರೂ ಸಹ ದನ ಸಿಕ್ಕಿರುವುದಿಲ್ಲ.

ನಂತರ ದಿಃ 15-10-2021 ರಂದು ಪಳ್ಳಿ ಗ್ರಾಮದ ಪೆಟ್ರೋಲ್ ಬಂಕಿನ ಸಿಸಿ ಟಿ ವಿ ಕ್ಯಾಮೆರದ ದೃಶ್ಯಾವಳಿಗಳಲ್ಲಿ ಒಂದು ಬಿಳಿ ಬಣ್ಣದ ಕಾರಿನಲ್ಲಿ ದನವನ್ನು ತುಂಬಿಸುತ್ತಿರುವುದು ಕಂಡು ಬಂದಿರುತ್ತದೆ. ಆನಂತರ ಯಾರೋ ಕಳ್ಳರು ನಮ್ಮ ದನವನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ ಎಂದು ಅನುಮಾನಗೊಂಡು ದಿಃ 16-10-2021 ರಂದು ಪೋಲಿಸ್ ಮಣ್ಣಿನ ಠಾಣೆಯಲ್ಲಿ ಚಾಸಾ 1 ರವರು ಪಿರ್ಯಾದಿ ದಾಖಲಿಸಿರುತ್ತಾರೆ. ನಂತರ ಮರುದಿನ ಪೋಲಿಸರು ನಮ್ಮ ಮನೆಯ ಹಟ್ಟಿಗೆ ಬಂದು ಚಾಸಾ 8 ಮತ್ತು 9 ರವರ ಸಮಕ್ಷಮ ಮಹಜರು ಮಾಡಿರುತ್ತಾರೆ ಅವರಿಗೆ ಸ್ಥಳವನ್ನು ಚಾಸಾ 1 ರವರು ತೋರಿಸಿಕೊಟ್ಟಿರುತ್ತಾರೆ.

ಪೋಲಿಸರು ಪ್ರಕರಣ ಕುರಿತು  ನನ್ನ ಹೇಳಿಕೆಗಳನ್ನು  ತೆಗೆದುಕೊಂಡಿರುತ್ತಾರೆ.

ಪೋಲಿಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಸಿ ಡಿ ಯನ್ನು ಪ್ಲೇ ಮಾಡಿ ನೋಡಲಾಗಿದ್ದು ಸದರಿ ದೃಶ್ಯಾವಳಿ ಮಣ್ಣಿನ ಗಳಲ್ಲಿ ಒಂದು ಕಾರು ಓಡಾಡಿರುವುದು ಕಂಡು ಬಂದಿರುತ್ತದೆ. ಅದನ್ನು ಹೊರತು ಪಡಿಸಿ ಯಾವುದೇ ದನವನ್ನಾಗಲೀ ಇತರ ಪ್ರಾಣಿಗಳನ್ನಾಗಲೀ ಕಾರಿಗೆ ತುಂಬಿಸುತ್ತಿರುವುದು ಕಂಡು ಬಂದಿರುವುದಿಲ್ಲ.

<u>ಪಾಟೀ ಸವಾಲು</u> ಃ 3 ನೇ ಆರೋಪಿ ಪರ ಃ ಶ್ರೀ ಪಿ ಎ ಎಸ್ ವಕೀಲರಿಂದ ಃ

ನಮ್ಮ ಮನೆಗೆ ಪೋಲಿಸರು ಬಂದ್ದಿದ್ದಾರೆ ಎಂದು ಹೇಳುವ ಸಮಯದಲ್ಲಿ ಕರು ಇರಲಿಲ್ಲ. ದನವನ್ನು ಹಟ್ಟಿಯಲ್ಲಿ ಕಟ್ಟುತ್ತೇವೆ. ಹಟ್ಟಿಯಲ್ಲಿ ದನ ಕಟ್ಟಿದ ಕುರುಹು ಇದ್ದ ಬಗ್ಗೆ ನಿಪಿ-2 ರಲ್ಲಿ ಕಾಣಿಸಿರುವುದಿಲ್ಲ ಎಂದರೆ  ಸರಿ. ಮುಂದುವರಿದು ಹಟ್ಟಿಯನ್ನು ಸ್ವಚ್ಛ ಮಾಡಿರುತ್ತೇವೆ. ಹಟ್ಟಿಯಲ್ಲಿ ತರಗೆಲೆಗಳನ್ನು ನಾವು ಹಾಕುವುದಿಲ್ಲ. ಹಟ್ಟಿಯ ನೆಲಕ್ಕೆ ಸಿಮೆಂಟ್ ಹಾಕಿರುತ್ತೇವೆ. ಮಣ್ಣಿನ ನೆಲಕ್ಕೆ ದನಗಳು ಮಲಗಲು ತರಗೆಲೆ ಹಾಕುತ್ತೇವೆ. ನಮ್ಮ ಹಟ್ಟಿ ತರಗೆಲೆ ಹಾಕುವಂತಹ ಮಣ್ಣಿನ ನೆಲ ಅಲ್ಲ,

ಪೋಲಿಸರು ಮನೆಗೆ ಬಂದಿದ್ದಾಗ ಆರೋಪಿತರನ್ನು ಹಾಗೂ ನಮ್ಮನ್ನು ಸೇರಿಸಿ ಭಾವಚಿತ್ರ ತೆಗೆದಿರುವುದಿಲ್ಲ.

ಈಗ ನಾನು ನ್ಯಾಯಾಲಯದಲ್ಲಿ ನೋಡಿದ ದೃಶ್ಯಾವಳಿಗಳಲ್ಲಿ ಯಾವುದೇ ಹಸುವನ್ನು ಕಾರಿಗೆ ತುಂಬಿಸುತ್ತಿರುವುದು ಕಂಡು ಬಂದಿರುವುದಿಲ್ಲ. ಅಲ್ಲದೇ ದೃಶ್ಯಾವಳಿಗಳಲ್ಲಿ ಸೇರಿದ ಕಾರು ಯಾವ ಕಂಪನಿಗೆ ಸೇರಿದ್ದು ಎಂದು ಗೊತ್ತಾಗುವುದಿಲ್ಲ. ರಿಟ್ಸ ಕಾರಿನಲ್ಲಿ ಹಸುವನ್ನು ತುಂಬಿಸಿಕೊಂಡು ನ್ಯಾಯಾಲಯದ ಮುಂದಿರುವ ಆರೋಪಿಗಳು ಹೋಗಿರುತ್ತಾರೆ ಎಂದು ಪೋಲಿಸರು ನಮಗೆ ಹೇಳಿರುತ್ತಾರೆ. ಅದನ್ನು ನಾವು ನಂಬಿರುತ್ತೇವೆ. ಆದೇ ರೀತಿ ಈ ದಿನ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯುತ್ತಿದ್ದೇನೆ. ನಮ್ಮ ಮನೆಯಲ್ಲಿ ಯಾವುದೇ ದನಗಳು ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತ ಘಟನೆ ನಡೆದಿರುವುದಿಲ್ಲ ಎಂದರೆ ಸರಿ.

<u>ಪಾಟೀ ಸವಾಲು</u> : 1 ಮತ್ತು 2 ನೇ ಆರೋಪಿತರ ಪರ : ಶ್ರೀ ಎಸ್ ಬಿ ಕೆ ವಕೀಲರು 3 ನೇ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ತಿಳಿಸಿರುತ್ತಾರೆ.

ಮರುವಿಚಾರಣೆ :: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the other witnesses. As the eye witness Pw 1 have completly turned hostile to the case of prosecution. No purpose will be served by issuance of summons to other witnesses. Hence by rejecting the prayer of learned APP evidence of other witnesses are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 20-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and

got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for

compliance Under 437A and
Arguments.

Call on : 17.08.2021

Prl. Civil Judge & JMFC.
Karkala